**ಚಾಸಾ-1**

**ಪ್ರಾಸಾ-1**

# <u>ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ , ಧಾರವಾಡ.</u>

**ಸಾಕ್ಷಿದಾರನ ಹೆಸರುಃ ?ಮಂಜುನಾಥ**
**ತಂದೆಯ ಹೆಸರುಃ ?ಮಾರುತಿ ಮೊಟೆನ್ನವರ್**
**ವಯಸ್ಸುಃ ??? 38 ವರ್ಷ**
**ಉದ್ಯೋಗಃ ???ಪಿಸಿ ಸಶಸ್ತ್ರ ಮೀಸಲು ಪಡೆ ಧಾರವಾಡ**
**ವಾಸಸ್ಥಳಃ ?ಧಾರವಾಡ**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿ. 22.03.2022.**

**<u>ಮುಖ್ಯ ವಿಚಾರಣೆಃ</u> ಮಾನ್ಯ ಸಸಅ ರವರಿಂದ**

ನಾನು **2008** ರಿಂದ ಧಾರವಾಡದ ಸಶಸ್ತ್ರ ಮೀಸಲು ಪಡೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಕಳೆದ ಮೂರು ವರ್ಷಗಳಿಂದ ನಾನು ಧಾರವಾಡದ ಪೋಲಿಸ ತರಬೇತಿ ಶಾಲೆಯಲ್ಲಿ ಸಹಾಯಕ ಕವಾಯತ್ ಬೋಧಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. **2017-18** ನೇ ಸಾಲಿನ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ ನೀಡುತ್ತಿದ್ದಾಗ ದಿಃ **18.05.2018** ರಂದು ಮದ್ಯಾಹ್ನ **12.30** ರ ಸಮಯದಲ್ಲಿ ನಾನು ನರೇಂದ್ರ ಬೈಪಾಸ ಹತ್ತಿರ ಇದ್ದಾಗ ಅನಾಮಧೇಯ ಮಹಿಳೆಯಿರಿಬ್ಬರೂ ಮೊಬೈಲ ನಂ.**9538291722** ರಿಂದ ನನ್ನ ಮೊಬೈಲ ನಂ.**9964329220** ಗೆ ಕರೆ ಮಾಡಿ ತಾನು ಧಾರವಾಡದ ಎಸ್ ಪಿ ಸಂಗೀತಾ ರವರು ಮಾತನಾಡುತ್ತಿದ್ದು ತನಗೆ ಗೊತ್ತಿರುವವರೊಬ್ಬರು ಜರ್ಮನ ಆಸ್ಪತ್ರೆಯಲ್ಲಿ ಚಿಕಿತ್ಸೆ ದಾಖಲಾಗಿದ್ದು ಅವರ ಚಿಕಿತ್ಸಾ ವೆಚ್ಚಕ್ಕೆ ಸಹಾಯವಾಗಲು ಪ್ರಶಿಕ್ಷಣಾರ್ಥಿಗಳಿಂದ ತಲಾ ರೂ.**2,000/-** ಸಂಗ್ರಹಿಸಿ ನೀಡಬೇಕೆಂದು ನೀಡಲಿಲ್ಲ ಎಂದರೆ ನನಗೆ ತೊಂದರೆಯಾಗುತ್ತದೆ ಎಂದು ಸದರಿ ಕರೆಯಲ್ಲಿ ಹೆದರಿಸಿದರು.

ಇದಾದನಂತರ ಮತ್ತೆ ಸದರಿ ಮೇಲೆ ಹೇಳಿ ನಂಬರನಿಂದ ಸದರಿ ಅನಾಮಧೇಯ ಮಹಿಳೆ ಕರೆ ಮಾಡಿ ಸದರಿ ಮೇಲೆ ಹೇಳಿದ ಹಣವನ್ನು ಸಂಗ್ರಹಿಸಲಿಲ್ಲವೆಂದರೇ ನನಗೆ ತೊಂದರೆಯಾಗುತ್ತದೆ ಎಂದು ಹೆದರಿಸಿದರು. ಆ

ನಂತರ ಚಾಸಾ**9** ರವರು ನನಗೆ ಫೋನ ಮಾಡಿ ಎಸ್ ಪಿ ಮೇಡಂ ರವರು ಫೋನ ಮುಖಾಂತರ ತಿಳಿಸಿರುವ ಹಾಗೇ ನಡೆದುಕೊಳ್ಳಿ ಇಲ್ಲವಾದರೇ ನಿಮಗೆ ತೊಂದರೆ ಆಗುತ್ತದೆ ಎಂದು ಹೇಳಿದರು. ಆ ನಂತರ ನಾನು ಸದರಿ ತರಬೇತಿ ಕೇಂದ್ರಕ್ಕೆ ಬಂದಾಗ ಚಾಸಾ**6** ಮತ್ತು **8** ರವರೂ ಸಹ ನನಗೆ ಅವರಿಗೆ ನನಗೆ ಬಂದ ರೀತಿ ಕರೆ ಬಂದಿದ್ದಾಗಿ ತಿಳಿಸಿದರು. ಅದೇ ರೀತಿ ಚಾಸಾ**7** ರವರಿಗೂ ಸಹ ಮೇಲೆ ಹೇಳಿದ ಮೊಬೈಲ ನಂಬರನಿಂದ ಕರೆ ಬಂದಿದ್ದು ಅವರು ಸದರಿ ಕರೆಯನ್ನು ಸ್ವೀಕರಿಸಿರಲಿಲ್ಲ. ಅದೇ ದಿನ ಸದರಿ ವಿಷಯವನ್ನು ನನ್ನ ಮೇಲಾಧಿಕಾರಿ ಗಳಿಗೆ ತಿಳಿಸಿ ಸದರಿ ಕರೆ ಮಾಡಿದ ಅನಾಮಧೇಯ ಮಹಿಳೆ ಹಾಗೂ ಚಾಸಾ**9** ರವರ ವಿರುದ್ದ ದೂರು ನೀಡಿದೆ. ಸದರಿ ದೂರನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ನಿಪಿ.1** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು.

ಆ ನಂತರ ಮರುದಿನ ಪೋಲಿಸರು ಬೆಳಿಗ್ಗೆ **9.00** ರಿಂದ **10.00** ವರೆಗೆ ಪಂಚನಾಮೆಯನ್ನು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ನಿಪಿ.2** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಸ್ಥಳದ ನಕಾಶೆಯನ್ನು ಸಹ ತಯಾರಿಸಿರುತ್ತಾರೆ. ಸದರಿ ನಕಾಶೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ನಿಪಿ.3** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೊ ವನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ನಿಪಿ.4** ಎಂದು ಗುರುತಿಸಲಾಯಿತು.

ಚಾಸಾ**9** ರವರಿಗೂ ಸಹ ನನಗೆ ಬಂದ ರೀತಿ ಅನಾಮಧೇಯ ಮಹಿಳೆಯಿಂದ ಕರೆ ಬಂದಿದ್ದು ಅದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಚಾಸಾ**9** ರವರು ನನಗೆ ಕರೆ ಮಾಡಿ ತಿಳಿಸಿದ್ದರು. ಅದನ್ನು ನಾನು ತಪ್ಪು ಗ್ರಹಿಸಿಕೊಂಡು ಸದರಿ ಚಾಸಾ**9** ರವರೂ ಸಹ ಅನಾಮಧೇಯ ಮಹಿಳೆಯೊಂದಿಗೆ ಶಾಮಿಲಾಗಿದ್ದಾರೆಂದು ತಿಳಿದು ಅವರ ವಿರುದ್ದವೂ ಸಹ ದೂರು ನೀಡಿದೆ. ಅ ನತಂರ ದಿಃ **22.05.2018** ರಂದು ಸದರಿ ಅನಾಮಧೇಯ ಮಹಿಳೆ ಯಾರೆಂದು ನನಗೆ ಗೊತ್ತಾಯಿತು.

**ಚಾಸಾ-1**
**ಪ್ರಾಸಾ-1**

ಸದರಿಯವರು ಹೆಸರು **1.** ಕಲ್ಪನಾ ಜಗನ್ನಾತ ಗೋಡಿ **2.** ಜಗನ್ನಾತ ಗೋಡಿ **3.** ಗಿರಿಜವ್ವ ನಾಗಶೆಟ್ಟಿ ಹಾಗೂ **4.** ಕೃಷ್ಣಮ್ಮ ಸೋಮರೆಡ್ಡಿ ಎಂದು ಗೊತ್ತಾಯಿತು. ಸದರಿಯವರನ್ನು ನೋಡಿದರೇ ಗುರುತಿಸಬಲ್ಲೇ. ಈ ದಿನ ನ್ಯಾಯಾಲಯದಲ್ಲಿ **1 , 2** ಮತ್ತು **4** ನೇ ಆರೋಪಿತರು ಹಾಜರಿದ್ದು ಸಾಕ್ಷಿ ಅವರನ್ನು ನೊಡಿ ಗುರುತಿಸಿರುತ್ತಾರೆ. **3** ನೇ ಆರೋಪಿ ತೀರಿಕೊಂಡಿರುತ್ತಾರೆ. **2** ನೇ ಆರೋಪಿ ಜಗನ್ನಾತ ರವರು ನಮ್ಮ ತರಬೇತಿ ಕೇಂದ್ರದಲ್ಲೇ ತರಬೇತುದಾರರಾಗಿದ್ದರು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ.**

ಆರೋಪಿತ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ನೀಡಲಾಗಿದೆ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೆ.)**
4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.